## ಮೆಳ್ಳೆಗಣ್ಣಿಗೆ ಶಸ್ತ್ರ ಚಿಕಿತ್ಸೆ

ಮೆಳ್ಳೆಗಣ್ಣು ಭೌತಿಕ ವಿಕಲತೆ. ಅಂಥವರನ್ನು ಕಂಡು ಉತ್ತರ ದಕ್ಷಿಣ, ವಂಡರ್ ಗಣ್ಣು ಎಂದು ಹೀಗಳೆಯಬೇಡಿ. ಕಣ್ಣು 'ಕ್ರಾಸ್' ಇದ್ದರೇನು ದೃಷ್ಟಿ 'ಕ್ರಾಸ್' ಅಂತೂ ಇರೋದಿಲ್ಲರಿ ಎಂದು ಆಡಿಕೊಳ್ಳುವವರಿಗೆ ಬುದ್ಧಿ ಹೇಳುವ ಅಗತ್ಯವಿಲ್ಲ. ಈಗ ಸಣ್ಣ ಶಸ್ತ್ರಚಿಕಿತ್ಸೆಯ ಮೂಲಕ ಅಂದಗೆಡಿಸಿರುವ ಮೆಳ್ಳೆಗಣ್ಣನ್ನು ಸಮಾನಾಂತರ ಕಣ್ಣುಗಳನ್ನಾಗಿ ಪರಿವರ್ತಿಸಬಹುದು ಎಂದು ವಾಷಿಂಗ್ಟನ್‌ನ ಬಾಸ್ಟನ್ ಮಕ್ಕಳ ಆಸ್ಪತ್ರೆಯ ಸಂಶೋಧಕರು ಹೇಳಿದ್ದಾರೆ.

ಅಂದಗೆಡಿಸುವ ಮೆಳ್ಳೆಗಣ್ಣನ್ನು ಸರಳವಾದ ಒಂದು ಶಸ್ತ್ರ ಚಿಕಿತ್ಸೆಯ ಮೂಲಕ ಸರಿಯಾಗಿ ಹೊಂದಾಣಿಕೆ ಮಾಡಬಹುದು. ಶಸ್ತ್ರ ಚಿಕಿತ್ಸೆ ಮೂಲಕ ಹೊಂದಿಸಿದ ಆ ಕಣ್ಣುಗಳು ಒಂದು ವಾರ ಕಳೆಯುವಷ್ಟರಲ್ಲಿ ಸರಿಯಾಗುತ್ತವೆ. ನೋಡುವ ನೋಟಕ್ಕೇನೂ ಬಾಧೆ ಇಲ್ಲದಂತೆ, ಸರಿ ಮಾಡಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಇದರ ಜೊತೆಗೆ ಮತ್ತೊಂದು ಸಂಗತಿಯನ್ನು ಅವರು ಇಲ್ಲಿ ಹೇಳಿದ್ದಾರೆ. ಅದೇನೆಂದರೆ, ವಕ್ರವಾಗಿ ಕಣ್ಣಿನ ಜೋಡಿ ರಚನೆಗೊಂಡಿದ್ದರೆ ಹಿಂಭಾಗದ ದೃಶ್ಯವನ್ನು ಕತ್ತನ್ನು ಬಾಗಿಸಿ– ಕಣ್ಣನ್ನು ಹೊರಳಿಸಿ ನೋಡಬೇಕಾಗುತ್ತದೆ. ಅದು ಕ್ರಮೇಣ ಬೆನ್ನುನೋವಿಗೆ ಕಾರಣವೂ ಆಗಬಹುದು. ಇಲ್ಲವೇ ಕತ್ತಿನಲ್ಲಿ ನೋವು ಉಂಟಾಗಬಹುದು. ಈಗ ಅಭಿವೃದ್ಧಿಗೊಳ್ಳುತ್ತಿರುವ ಶಸ್ತ್ರ ಚಿಕಿತ್ಸೆಯಿಂದ ಅಂತಹ ಸಮಸ್ಯೆಯನ್ನೂ ಹೋಗಲಾಡಿಸಬಹುದು ಎಂದು ಅವರು ಹೇಳುತ್ತಾರೆ.

## ಗರ್ಭವತಿಯರೇ, ಅಸ್ತಮಾ ಬಗ್ಗೆ ಎಚ್ಚರ ಇರಲಿ

ಅಸ್ತಮಾದಿಂದ ಬಳಲುವ ಗರ್ಭಿಣಿಯರು ಉಸಿರಾಟದ ತೊಂದರೆ ಕಾಣಿಸಿಕೊಳ್ಳದಿದ್ದರೂ ವೈದ್ಯರಿಗೆ ಹೇಳಿ ಚಿಕಿತ್ಸೆ ಪಡೆಯುವುದು ಅಜಾತ ಶಿಶುವಿನ ದೃಷ್ಟಿಯಿಂದ ಒಳ್ಳೆಯದು ಎಂದು ಆಸ್ಟ್ರೇಲಿಯಾದ ವೈದ್ಯರು ಹೇಳಿದ್ದಾರೆ.

ಸೂಕ್ತ ಔಷಧಿಯನ್ನು ತೆಗೆದುಕೊಳ್ಳದಿದ್ದರೆ ಜನಿಸುವ ಮಗುವಿಗೆ ಅಸ್ತಮಾ ಬರಬಹುದು ಎನ್ನುವುದು ಅಷ್ಟೇ ಅಲ್ಲ, ಬೆಚ್ಚಗೆ ತಾಯಿ ಗರ್ಭದಲ್ಲಿ ಓಡಾಡುವ ಶಿಶು, ಅವಧಿಗೆ ಪೂರ್ವದಲ್ಲಿಯೇ ಜಾರಬಹುದು. ಇಲ್ಲ ಕಡಿಮೆ ತೂಕದ ಶಿಶು ಜನಿಸಬಹುದು. ಯಾವುದಕ್ಕೂ ಮೊದಲೇ ಚಿಕಿತ್ಸೆ ತೆಗೆದುಕೊಳ್ಳುವುದು ಉತ್ತಮ ಎನ್ನುವುದು ಅವರ ಸಲಹೆ. ಅಸ್ತಮಾ ನಗರ ಜೀವನದಲ್ಲಿ ತೀರಾ ಸಾಮಾನ್ಯ ಎನ್ನುವ ಮಟ್ಟಕ್ಕೆ ಬೆಳೆಯುತ್ತಿದೆ. ಅಸ್ತಮಾಕ್ಕೆ ತುತ್ತಾದ ಗರ್ಭವತಿಯ ಶ್ವಾಸಕೋಶದಲ್ಲಿ ಉರಿಯೂತವನ್ನು ಉಂಟು ಮಾಡುವ 'ಪ್ಲಾಸೆಂಟಾ' ಬೇರೆ ಬೇರೆ ತೊಂದರೆಗಳಿಗೆ ಕಾರಣವಾಗುತ್ತದೆ. ಬಹುತೇಕ ಅಸ್ತಮಾ ಸಮಸ್ಯೆ ಇರುವ ಹೆಣ್ಣುಮಕ್ಕಳು ತಮ್ಮ ಗರ್ಭಾವಧಿಯಲ್ಲಿ ತೊಂದರೆಯನ್ನು ಒಂದಲ್ಲ ಒಂದು ಬಾರಿ ಅನುಭವಿಸುತ್ತಾರೆ ಎಂದು ಅವರು ಹೇಳಿದ್ದಾರೆ.

## ಟೀ ಕುಡಿದರೆ ಬೀಪಿ ಹತೋಟಿಗೆ

ಒಂದು ಕಪ್ಪು ಚಹಾ ಬೀಪಿಯನ್ನು ಕಮ್ಮಿ ಮಾಡಿ ಹ್ಯಾಪಿಯಾಗಿ ಇಡುತ್ತದೆ. ದಿನದಲ್ಲಿ ಮೂರು ಬಾರಿ ತಲಾ ಒಂದು ಲೋಟ ಕಪ್ಪು ಚಹಾ (ಬ್ಲಾಕ್ ಟೀ) ಹೀರಿದರೆ ಕ್ರಮೇಣ ರಕ್ತದ ಒತ್ತಡ ಕಡಿಮೆಯಾಗುತ್ತದೆ ಎಂದು ನೂತನ ಅಧ್ಯಯನ ಹೇಳಿದೆ.

ಆರು ತಿಂಗಳ ಕಾಲ ಸಂಶೋಧನೆ ನಡೆಸಿದ ಆಸ್ಟ್ರೇಲಿಯಾ ವಿಶ್ವವಿದ್ಯಾಲಯದ ಸಂಶೋಧಕರು, ಅಧಿಕ ರಕ್ತದೊತ್ತಡ ಮನುಷ್ಯರ ಹೃದಯ ಸಂಬಂಧಿ ಕಾಯಿಲೆಯ ಬೆಳವಣಿಗೆಗೆ ಕಾರಣವಾಗುತ್ತದೆ. ಚಹಾ ಸೇವನೆ ಮಾತ್ರ ಹೃದಯಕ್ಕೆ ಒಳಿತನ್ನು ಮಾಡುತ್ತದೆ ಎಂದು ಹೇಳಿದ್ದಾರೆ.

ತಮ್ಮ ಸಂಶೋಧನಾ ಅಧ್ಯಯನಕ್ಕೆ 35ರಿಂದ 75ರ ವಯಸ್ಸಿನ 95 ಮಂದಿಯನ್ನು ಒಳಪಡಿಸಿದ್ದರು. ಅವರಿಗೆ ದಿನಕ್ಕೆ ಮೂರು ಬಾರಿಯಂತೆ ನಿಯಮಿತವಾಗಿ 6 ತಿಂಗಳ ಕಾಲ ಕಪ್ಪು ಚಹಾವನ್ನು ನೀಡಲಾಗಿತ್ತು. ಕ್ರಮೇಣ ಅವರಲ್ಲಿ ಇದ್ದ ಅಧಿಕ ರಕ್ತದ ಒತ್ತಡದ ಪ್ರಮಾಣ ಕಡಿಮೆಯಾಗಿದ್ದನ್ನು ಗುರುತಿಸಲಾಯಿತು. ನಂತರವೇ ಅವರು ಚಹಾ ಹೃದ್ರೋಗಿ ಸ್ನೇಹಿ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

**-ಟಿಪ್ಸ್**

## ಸಮುದ್ರ ಮಥನ



### ಎಫ್‌ಎಂ ಅಚ್ಚ ಕನ್ನಡದಲ್ಲಿರಲಿ

'ಎಫ್‌ಎಂ ದುನಿಯಾ ಇದು ಕಿವಿ ಇದ್ದವರ ಕಾಲ' ಉಮಾ ಅನಂತ್ ಮುಖಪುಟ ಲೇಖನ ಚೆನ್ನಾಗಿ ಮೂಡಿಬಂದಿದೆ. ರೇಡಿಯೋ ಜಾಕಿಗಳ ಮಾತಿನ ಮೋಡಿಯೂ ಇದರ ಜನಪ್ರಿಯತೆಗೆ ಕಾರಣವಾಗಿದೆ. ಆದರೆ ಎಫ್‌ಎಂ ಅಚ್ಚಕನ್ನಡದಲ್ಲಿ ಮೂಡಿ ಬರಲಿ.

-ಶೀಲಾ ಸತ್ಯೇಂದ್ರಸ್ವಾಮಿ, ಹರವೆ/ ಶ್ರೀನಾಥ್ ಕೊನೇಟಿ, ಬೆಂಗಳೂರು/ ಡಿ.ಎಲ್.ನಾಗರಾಜ್, ಚನ್ನಗಿರಿ ಎಸ್. ನಿತ್ಯ, ಮೂಡಬಿದರೆ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಜಯದೇವಪ್ಪ, ಹಾಸನ/ ವಿಭಾ ಮುರಳೀಧರ್, ತುಮಕೂರು

### ಶತಮಾನದ ಶಾಪ!

ಹುಬ್ಬಳ್ಳಿ, ಬೆಳಗಾವಿ, ಗುಲ್ಬರ್ಗದಂತಹ ಮಹಾನಗರಗಳಲ್ಲಿಯೂ ಖಾಸಗಿಯವರ ಎಫ್‌ಎಂ ಇನ್ನೂ ಬಂದಿಲ್ಲ! ಇಂತಹ ಜನಪ್ರಿಯ ಕಾರ್ಯಕ್ರಮ ಬೆಂಗಳೂರಿಗಷ್ಟೇ ಮೀಸಲಾಗಿದೆ ಎಂದರೆ ನಾವಿನ್ನೂ ಯಾವ ಯುಗದಲ್ಲಿ ಇದ್ದೇವೆ? ಕನ್ನಡಿಗರ ರಾಜಧಾನಿ ಬೆಂಗಳೂರು– ತಮಿಳುನಾಡಿನ ಗಡಿ ಪ್ರದೇಶದಲ್ಲಿರುವುದೇ ಇದಕ್ಕೆ ಕಾರಣವೇ? ರಾಜಧಾನಿ ಕರ್ನಾಟಕದ ಮಧ್ಯ ಭಾಗದಲ್ಲಿ ಇಲ್ಲದಿರುವುದು ಶತಮಾನಗಳ ಶಾಪ.

-ಎಚ್.ಆರ್.ವಸ್ತ್ರದ, ಧಾರವಾಡ/ ರೇವಣಸಿದ್ಧ ಪೂಜಾರಿ, ಲಿಂಗಸುಗೂರು

### ವಿವಿಧ ಭಾರತಿ ಪ್ರಸ್ತಾಪ ಇಲ್ಲ!

ಇಂಪಾದ, ಸ್ವಚ್ಛಕನ್ನಡದ ಅತ್ಯುತ್ತಮ ಕಾರ್ಯಕ್ರಮ ಪ್ರಸಾರ ಮಾಡುವ ವಿವಿಧ ಭಾರತಿ ವಾಣಿಜ್ಯಪ್ರಸಾರ ಕೇಂದ್ರದ ಬಗ್ಗೆ ಪ್ರಸ್ತಾಪವಿಲ್ಲ. ಇದಕ್ಕೂ ಲಕ್ಷಾಂತರ ಶ್ರೋತೃವರ್ಗ ಇದೆ, ಸಂಘವೂ ಇದೆ.

-ಎಂ.ಪಿ.ಸ್ವಾಮಿ, ಬಿ.ಎಸ್.ರಮೇಶ್, ನೆ.ಲ.ರಾಂ, ಕೆ.ಎಸ್.ನೀಳಾ, ಬೆಂಗಳೂರು

### ನೇಪಾಳದಲ್ಲಿ ನಕಲಿ ನೋಟು!

ಶ್ರೀನಿವಾಸ ಜೋಕಟ್ಟೆ ಸಚಿತ್ರ ಲೇಖನ 'ಮಾವೋವಾದಿಗಳ ನೇಪಾಳದಲ್ಲಿ' ಓದಿದ ನಂತರ ನೆರೆಯ ನೇಪಾಳಕ್ಕೆ ತೆರಳಲು ಪಾಸ್‌ಪೋರ್ಟ್‌ನ ಅವಶ್ಯಕತೆ ಇಲ್ಲವೆಂಬ ವಿಷಯ ಗೊತ್ತಾಯಿತು. ನಕಲಿ ನೋಟುಗಳ ಚಲಾವಣೆ ತಡೆಯುವುದಕ್ಕಾಗಿ ಭಾರತದ 500 ಹಾಗೂ 1000ರೂ. ನೋಟುಗಳನ್ನು ಸ್ವೀಕರಿಸದಿರುವುದು ಒಳ್ಳೆಯ ಉಪಾಯವೇ ಸರಿ! ನಮ್ಮಲ್ಲೂ ಹೀಗೆ ಮಾಡಬಹುದು.

-ಪಿ.ಎನ್. ಶ್ರೀವತ್ಸ, ಬೆಂಗಳೂರು

### ಮಾವೋವಾದಿ ಕೈಯಲ್ಲಿ ನೇಪಾಳ!

ಶೇ. 85 ಹಿಂದೂ ಜನಸಂಖ್ಯೆಯನ್ನು ಹೊಂದಿ ಜಗತ್ತಿನ ದೊಡ್ಡ ಹಿಂದೂ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನೇಪಾಳ ಈಗ ಮಾವೋವಾದಿಗಳ ಕೈಯಲ್ಲಿ ನರಳುತ್ತಿರುವುದು ದುಃಖದಾಯಕ!

-ಕೋಟೀಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ರಾಷ್ಟ್ರಧ್ವಜಕ್ಕೆ ಅಪಮಾನ!

ಗಣರಾಜ್ಯೋತ್ಸವ ದಿನ ರಸ್ತೆಯ ಮೇಲೆ ರಾಷ್ಟ್ರಧ್ವಜದ ಚಿತ್ರ ಬರೆದು ಅದನ್ನು ತುಳಿದರೆ ರಾಷ್ಟ್ರಧ್ವಜಕ್ಕೆ ನಾವು ತೋರಿದ ಅಗೌರವವಲ್ಲವೇ ಎಂದು ಮೈಸೂರಿನ ಪಿ.ಜಿ. ರಾಘವೇಂದ್ರ 'ನಿಮ್ಮ ಪುಟ' ಬರಹದಲ್ಲಿ ಪ್ರಶ್ನಿಸಿದ್ದಾರೆ. ಕ್ರಿಕೆಟ್‌ನಲ್ಲಿ ಜಯ ಗಳಿಸಿದಾಗ ರಾಷ್ಟ್ರಧ್ವಜದಿಂದ ಮುಖದ ಬೆವರು ಒರೆಸಿಕೊಳ್ಳುವುದು, ಅದರ ಮೇಲೆ ಓಡಾಡುವುದೂ ಕೂಡ ಅಪಮಾನ ಮಾಡಿದಂತೆಯೇ.

-ಜಯಪ್ರಕಾಶ ತಲವಾಟ, ಸಾಗರ

### ಮಾರ್ಮಿಕ ವಿಚಾರ ಲಹರಿ

'ದೇವರನ್ನು ನಂಬಿ ಕೆಟ್ಟವರಿಲ್ಲ!' ಶಿಕಾಕು ವಿಚಾರ ಲಹರಿ ಮಾರ್ಮಿಕವಾಗಿದೆ.

-ಮಹಾವೀರ ಕಾಸಾರ, ಶಿವಮೊಗ್ಗ/ ಪಿ.ಎ.ಸುಧೀಂದ್ರ, ಬೆಂಗಳೂರು

### ತಡವಾಗಿ ಸಂದ ಪ್ರಶಸ್ತಿ

ಸ್ತ್ರೀ ನಾಟಕ ಮಂಡಳಿಯ ಆರ್.ನಾಗರತ್ನಮ್ಮನವರಿಗೆ ಪದ್ಮಶ್ರೀ ತಡವಾಗಿ ಬಂತು ಎಂಬ ಗುಡಿಹಳ್ಳಿ ನಾಗರಾಜ ಅವರ ಅನಿಸಿಕೆ ಸರಿ ಇದೆ. ಇವರಿಗೆ 86ಕ್ಕಾದರೂ ಬಂದಿದೆ. 98 ಕಳೆದರೂ ಏಣಗಿ ಬಾಳಪ್ಪನವರಿಗೆ ಇನ್ನೂ ಪದ್ಮಶ್ರೀ ಬಂದಿಲ್ಲ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಸ್.ಲಕ್ಷ್ಮೀ ನರಸಿಂಹ, ಚಾಮರಾಜನಗರ/ ವಿನಯ ಆರ್. ಮರಾಠೆ, ಬೆಳಗಾವಿ

### ಆತ್ಮವಿಶ್ವಾಸದ ಪ್ರತೀಕ ಲಿಯಾಂಡರ್

38ರ ಹರೆಯದ ಲಿಯಾಂಡರ್ ಪೇಸ್ ಬಗೆಗಿನ ಓಂಕಾರ ಮೂರ್ತಿ ಲೇಖನ ರೋಚಕವಾಗಿತ್ತು. ಆಟದಲ್ಲಿ ಸೋತರೂ ಗೆದ್ದರೂ ಅವರಾಡುವ ಮಾತು ನಮ್ರತೆ ಹಾಗೂ ವಿಶ್ವಾಸದಿಂದ ಕೂಡಿರುತ್ತದೆ.

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ/ ಡಿ.ಎಲ್. ನಾಗರಾಜ್, ಚನ್ನಗಿರಿ

### ಪ್ರತಿಷ್ಠೆಗೆ ಮಕ್ಕಳ ಹಿತ ಬಲಿ

ಸಂಗೀತಾ ಜಾನ್ಸನ್‌ರ 'ಸ್ಪರ್ಧೆಗಳು ಮತ್ತು ಗೆಲ್ಲುವ ಧಾವಂತ' ಲೇಖನ ಚೆನ್ನಾಗಿತ್ತು.

-ಸುಷ್ಮಾ ಬಡಸ, ಬೈಲಹೊಂಗಲ

### ಕಥೆ ಚಲೋ ಇತ್ರಿ

ಬಸು ಬೇವಿನಗಿಡದರ 'ಹೂಲಿಕಟ್ಟೆ ಶಿವಮ್ಮನ ಸತ್ಯಾಗ್ರಹ' ಕಥೆಯ ವಸ್ತು, ಭಾಷೆ ಚಲೋ ಇತ್ರಿ. ಚಂದ ನಿರೂಪಣೆ ಮಾಡ್ಯಾರ.

-ಬಿ.ಎಸ್.ಮಳ್ಳೂರ, ಹಲಗತ್ತಿ/ ರಾಮಣ್ಣ ಶಿಳ್ಳಿನ, ಕೊಪ್ಪಳ